**ದಿನಾಂಕಃ 21-06-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಐ.ಎಸ್.ಇ. ವಕೀಲರಿಂದಃ**

12. ನಾನು ಯಾವ ಯಾವ ಆಸ್ತಿಗಳ ಮೇಲೆ ದಾವೆ ಮಾಡಿರುತ್ತೇನೆ ಎಂದು ಅವುಗಳ ಸರ್ವೆ ನಂಬರ್ ಹೇಳಲು ಬರುವುದಿಲ್ಲ ಆದರೆ ಮನೆ, ಸೈಟು ಮತ್ತು ಜಮೀನುಗಳ ಮೇಲೆ ದಾವೆ ಮಾಡಿರುತ್ತೇನೆ ಎನ್ನುತ್ತಾರೆ. ದಾವಾ ಆಸ್ತಿಗಳ ಅಳತೆ ಎಷ್ಟು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಬರೆದುಕೊಂಡಿದ್ದು ಅದನ್ನು ಯಾವ ದಾಖಲಾತಿಗಳನ್ನು ನೋಡಿ ಹೇಳುತ್ತಿದ್ದೇನೆ ಎಂದು ನನಗೆ ಹೇಳಲು ಬರುವುದಿಲ್ಲ. ದಿನಾಂಕ 07.03.2015 ರಂದು ನನ್ನನ್ನು ದತ್ತು ಪಡೆಯಲಾಗಿದೆ ಎಂದು ಬರೆದುಕೊಂಡಿರುತ್ತೇನೆ. ನನ್ನನ್ನು ಬ್ಯಾಡಗಿಯಲ್ಲಿ ದತ್ತು ಪಡೆಯಲಾಗಿದೆ. ಸ್ಥಳದ ಹೆಸರು ನನಗೆ ನೆನಪಾಗುತ್ತಿಲ್ಲ. ಸದರಿ ದಿನ ಯಾರು ಹಾಜರಿದ್ದರು ಎಂದು ನನಗೆ ನೆನಪಿಲ್ಲ. ಸದರಿದಿನ ಏನೆಲ್ಲಾ ಕಾರ್ಯಗಳನ್ನು ಮಾಡಿದರು ಎಂದು ನನಗೆ ನೆನಪಿಲ್ಲ. ದಿನಾಂಕಃ 07.03.2015 ರಂದು ನನ್ನನ್ನು ಯಾರು ಸಹ ದತ್ತು ಪಡೆದಿಲ್ಲ ಎಂದರೆ ಸರಿಯಲ್ಲ. ಹಾಗೂ ನನ್ನನ್ನು ದತ್ತು ಪಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನನ್ನನ್ನುಯಾರೂ ಸಹ ದತ್ತು ಪಡೆಯದೇ ಇದ್ದುದ್ದರಿಂದ ಸದರಿ ದತ್ತು ಪಡೆದ ಸ್ಥಳ ಹಾಗೂ ಸದರಿ ಸಮಯದಲ್ಲಿ ಯಾರು ಇದ್ದರು ಎಂದು ನನಗೆ ಹೇಳಲಾಗುತ್ತಿಲ್ಲ ಎಂದರೆ ಸಾಕ್ಷಿ ನಾನು ಚಿಕ್ಕವಳಿದ್ದೆ. ಆದ್ದರಿಂದ ಹೇಳಲಾಗುತ್ತಿಲ್ಲ ಎನ್ನುತ್ತಾರೆ.

13. ನಾನು 9 ನೇ ತರಗತಿಯಲ್ಲಿದ್ದಾಗ ನನ್ನನ್ನು ದತ್ತು ಪಡೆಯಲಾಗಿದೆ ಎಂದು ನನಗೆ ಗೊತ್ತಾಯಿತು. ಸದರಿ ವಿಷಯವನ್ನು ನನಗೆ ನನ್ನ ಜನಕ ತಂದೆ ಹೇಳಿದರು. ಸದರಿ ದತ್ತು ಪಡೆದ ನಂತರ ನನ್ನ ಶಾಲಾ ದಾಖಲಾತಿಗಳಲ್ಲಿ ದತ್ತಕ ತಂದೆಯ ಹೆಸರನ್ನು ಸೇರಿಸಲಿಲ್ಲ. ಸದರಿ ದತ್ತದ ತಂದೆಯ ಹೆಸರನ್ನು ಸೇರಿಸಲು ಏನಾದರೂ ತೊಂದರೆ ಇತ್ತಾ

ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನನ್ನು ದತ್ತು ಪಡೆಯದೇ ಇದ್ದುದ್ದರಿಂದ ನನ್ನ ಶಾಲಾ ದಾಖಲಾತಿಗಳಲ್ಲಿ ಆ ಬಗ್ಗೆ ನಮೂದು ಮಾಡಿಲ್ಲ ಎನ್ನುತ್ತಾರೆ. ನನ್ನ ಶಾಲಾ ದಾಖಲಾತಿಗಳಲ್ಲಿ ಮಾತ್ರ ನನ್ನ ಜನಕ ತಂದೆಯ ಹೆಸರು ಮುಂದುವರೆದಿದೆ ಆದರೆ ನನ್ನ ಇತರೆ ದಾಖಲಾತಿಗಳಾದ ಆಧಾರ ಕಾರ್ಡ್ ಪಾನ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್ ಬುಕ್ ಗಳಲ್ಲಿ ನನ್ನ ದತ್ತಕ ತಂದೆಯ ಹೆಸರು ನಮೂದು ಇದೆ. ಸದರಿ ನನ್ನ ಇತರೆ ದಾಖಲಾತಿಗಳಾದ ಆಧಾರ ಕಾರ್ಡ್ ಪಾನ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್ ಬುಕ್ ಗಳಲ್ಲಿ ನನ್ನ ಹೆಸರನ್ನು ನಾನೇ ಬದಲಾವಣೆ ಮಾಡಿರುತ್ತೇನೆ. ಸದರಿ ಬದಲಾವಣೆಯನ್ನು ನಾನು ಯಾವ ದಿನಾಂಕದಂದು ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ.

14. ನನ್ನ ದತ್ತು ತಾಯಿ ಇದ್ದಾಗ ನನಗೆ ದಾವಾ ಸ್ವತ್ತುಗಳಲ್ಲಿ ಪಾಲು ಇದೆ ಎಂದು ಗೊತ್ತಿತ್ತು. ಸದರಿ ನನ್ನನ್ನು ದತ್ತು ಪಡೆದ ವಿಚಾರ ನನ್ನ ಜನಕ ತಂದೆ ನನಗೆ ತಿಳಿಸಿದ ಸಮಯದಲ್ಲಿ ನನ್ನ ದತ್ತು ತಾಯಿ ಜೀವಂತ ಇದ್ದರು. ಸದರಿ ನನ್ನ ಜನಕ ತಂದೆ ನನಗೆ ಸದರಿ ದತ್ತಕ ಬಗ್ಗೆ ಹೇಳಿದ ನಂತರ ಸದರಿ ನನ್ನ ದತ್ತು ತಾಯಿ 4 ವರ್ಷಗಳ ಕಾಲ ಜೀವಂತ ಇದ್ದರು. ಸದರಿ ಸಮಯದಲ್ಲಿ ನನ್ನ ದತ್ತು ತಾಯಿ ಆರೋಗ್ಯವಾಗಿ ಇರಲಿಲ್ಲ. ಸದರಿಯವರು ಎಷ್ಟು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ದತ್ತಕ ತಾಯಿ ಹೆಸರಿನಿಂದ ಅವರ ಜೀವಿತಾವಧಿಯಲ್ಲಿ ಎರಡೂವರೆ ಎಕರೆ ಜಮೀನು ಇತ್ತು. ಸದರಿ ಜಮೀನು ಸುಣ್ಣದಕೊಪ್ಪ ಗ್ರಾಮದ ಜಮೀನು ಎಂದರೆ ಸರಿ. ಅದರ ಸರ್ವೆ ನಂ.100/ಪಿ ಎಂದರೆ ನನಗೆ ಗೊತ್ತಿಲ್ಲ ಅದರ ಕ್ಷೇತ್ರ 01 ಎಕರೆ 18 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಇನ್ನೊಂದು ಸರ್ವೆ ನಂ.109/9 ಕ್ಷೇತ್ರ 36 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ನನ್ನ ದತ್ತಕ ತಾಯಿಯ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಸದರಿ ಆಸ್ತಿಗಳು ದಿನಾಂಕಃ 04.07.2024 ರಂದು ಖಾತೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ದಾವೆ ದಾಖಲಿಸುವ ಸಮಯದಲ್ಲಿ ನನ್ನ ದತ್ತು ತಾಯಿಯ ಹೆಸರಿನಲ್ಲಿದ್ದವು ಎಂದರೆ ಸರಿ. ಸದರಿ ಆಸ್ತಿಗಳನ್ನು ನಾನು ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

15. ಪ್ರತಿವಾದಿಯರನ್ನು ನನ್ನ ದತ್ತು ತಾಯಿ ತೀರಿಕೊಂಡ ನಂತರ ಪಾಲಿನ ಬಗ್ಗೆ ಕೇಳಿದ್ದೆವು. ಸದರಿ ಪಾಲು ಕೇಳಿದ ದಿನಾಂಕ ಹೇಳಲು ಬರುವುದಿಲ್ಲ. ಪ್ರತಿವಾದಿಯರನ್ನು ಪಾಲು ನೀಡಿ ಎಂದು ನಾನು ಯಾವತ್ತೂ ಕೇಳಿಲ್ಲ ಆದ್ದರಿಂದ ಅದರ ದಿನಾಂಕ ನನಗೆ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನಾನು ವಹಿವಾಟು ಮಾಡುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಈ ವರ್ಷ ಯಾವ ಬೆಳೆ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಆಸ್ತಿಗಳ ವಹಿವಾಟನ್ನು ನಾನು ಮಾಡದೇ ಇದ್ದುದ್ದರಿಂದ ಈ ವರ್ಷ ಸದರಿ ಜಮೀನುಗಳಲ್ಲಿ ಏನು ಬೆಳೆ ಇದೆ ಎಂದು ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪ್ರತಿವಾದಿಯರ ವಹಿವಾಟಿನಲ್ಲಿವೆ ಎಂದರೆ ನನಗೆ ಗೊತ್ತಿಲ್ಲ. ಈಗ ನಾನು ದಾವಾ ಸ್ವತ್ತುಗಳಲ್ಲಿ ವಹಿವಾಟು ಮಾಡುತ್ತಿಲ್ಲ.

16. ನನಗೆ ದಾವಾ ಸ್ವತ್ತುಗಳಲ್ಲಿ 1/5 ಹಿಸ್ಸೆ ಬರುತ್ತದೆ. ನಾನು ಈದಾವೆಯಕ್ಕಿಂತ ಮೊದಲು ಸದರಿ ಕನ್ನಪ್ಪ ಮತ್ತು ಪುಷ್ಪಾರವರ ದತ್ತು ಮಗಳು ಎಂದು ಠರಾಯಿಸಲು ಯಾವುದೇ ದಾವೆ ಹೂಡಿರಲಿಲ್ಲ.

17. ದತ್ತು ಪತ್ರ ನಿಪಿ-11 ನ್ನು ನಾನೇ ಹಾಜರು ಪಡಿಸಿರುತ್ತೇನೆ. ನಿಪಿ-11 ನ್ನು ನನಗೆ ನನ್ನ ಜನಕ ತಂದೆ ನೀಡಿರುತ್ತಾರೆ. ಈಗ ನನಗೆ ತೋರಿಸುತ್ತಿರುವ ಮರಣ ಪ್ರಮಾಣ ಪತ್ರದ ಜೆರಾಕ್ಸ ಪ್ರತಿಯನ್ನು ತಾಲೂಕು ಆಸ್ಪತ್ರೆ ಬ್ಯಾಡಗಿಯಿಂದ ಪಡೆಯಲಾಗಿದೆ ಎಂದು ಅದರ ಮೇಲೆ ಬರೆದಿದೆ. ಈಗ ನನಗೆ ತೋರಿಸುತ್ತಿರುವ ನನ್ನ ದತ್ತಕ ತಾಯಿ ಪುಷ್ಪಾ ರವರ ಮರಣ ಪ್ರಮಾಣ ಪತ್ರದ ಜೆರಾಕ್ಸ ಪ್ರತಿಯನ್ನು ದಿನಾಂಕ: 03.09.2020 ರಂದು ತೆಗೆಯಿಸಲಾಗಿದೆ. ಸದರಿ ಮರಣ ಪ್ರಮಾಣ ಪತ್ರಗಳಲ್ಲಿ ವಿಳಾಸ ಸುಣ್ಣದಕೊಪ್ಪ ಗ್ರಾಮ, ಶಿಕಾರಿಪೂರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ನನ್ನದತ್ತು ತಾಯಿ ಪುಷ್ಪಾರವರ ಇನ್ನೊಂದು ಮರಣ ಪ್ರಮಾಣ ಪತ್ರವನ್ನು ನಿಪಿ-33 ಎಂದು ಹಾಜರು ಪಡಿಸಿದ್ದು ಅದರಲ್ಲಿ ಸದರಿ ನನ್ನ ತಾಯಿಯ ಖಾಯಂ ವಿಳಾಸ ಬ್ಯಾಡಗಿ ಎಂದು ಬರೆಯಲಾಗಿದೆ ಎಂದರೆ ಸರಿ. ನನ್ನ ದತ್ತು ತಾಯಿ ತೀರಿಕೊಂಡಿದ್ದು ಸುಣ್ಣದಕೊಪ್ಪ ಗ್ರಾಮದಲ್ಲಿ. ನಿಪಿ-33 ನ್ನು ಯಾರು ತಿದ್ದುಪಡಿ ಮಾಡಿರುತ್ತಾರೆ ಎಂದು

ನನಗೆ ಗೊತ್ತಿಲ್ಲ. ನಿಪಿ-33 ನ್ನು ತಿದ್ದುಪಡಿ ಮಾಡಿಸಿ ನಾನೇ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-33 ರಲ್ಲಿ ವಿಳಾಳವನ್ನು ಬದಲಾಯಿಸಲಾಗಿದೆ ಎಂದು ಶರಾ ಬರೆಯಲಾಗಿದೆ ಎಂದರೆ ಸರಿ. ನಿಪಿ-32 ಮರಣ ಪ್ರಮಾಣ ಪತ್ರವನ್ನು ನಾನು ಖೊಟ್ಟಿ ರೀತಿಯಿಂದ ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

18. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಕೊಪ್ಪದ ಮನೆತನಕ್ಕೆ ದತ್ತು ಹೋಗದೇ ಇದ್ದರೂ ಸಹ ಹೋಗಿದ್ದೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಕಬಳಿಸುವಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೇ ಯಾವುದೇ ದತ್ತು ವಿಧಿ-ವಿಧಾನ ನಡೆದಿಲ್ಲ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.